ರಟ್ಟಿ ಬಲ ತೋರುಸ್ತಾನಂದ್ರೆ? ಈ ಧಿಮಾಕ್ನ ದುಡಿಮಿ ಮಾಡೋದ್ರಾಗೆ ತೋರಿಸ್ಬೇಕು ಅವ್ನು. ಅವ್ನಿಗೊಂದು ಮದುವಿ ಮಾಡಿದ್ರೆ ಸರಿ ಹೋಗ್ತಾನೇನೋ...' ಗಂಗವ್ವ ಚಾ ಕಪ್ಪು ಎತ್ತಿಡುತ್ತ ತನಗನ್ನಿಸಿದ್ದನ್ನು ಹೇಳಿದಳು.

'ದುಡೀಲಾರದವಗೆ ತಂದು ಮದುವಿ ಮಾಡಿದ್ರೆ ಕಟಗೊಂಡಾಕಿ ಏನ್ ಸುಖ ಉಂಡಾಳು ಗಂಗವ್ವ, ಹೆತ್ತಾಕಿಗೇ ತುತ್ತು ಅನ್ನ ಹಾಕದೋನು, ಕಷ್ಟಸುಖ ಕೇಳದೋನು... ಇಂಥ ಮಗ ಯಾರಿಗೂ ಬ್ಯಾಡ...' ಹುಸೇನವ್ವ ಮತ್ತೆ ಕಣ್ಣೊರೆಸಿಕೊಂಡಳು.

'ಬಾಳ ಬದ್ಮಾಸ ಅದಾನವ...' ಎನ್ನುತ್ತಾ ಮಲಗೋ ಕ್ವಾಣೆಯಿಂದ ಶಂಕರಪ್ಪ ಹೊರಬಂದರು. ಎದ್ದು ನಿಂತ ಹುಸೇನವ್ವಗೆ ಕೂರು ಎಂದು ಕೈಸನ್ನಿ ಮಾಡಿ 'ನೀ ಹೇಳಿದ್ದೆಲ್ಲ ಕೇಳಿಸ್ಕಂಡೀನಿ. ಹುಂ ಅಂದ್ರೆ ಪೊಲೀಸ್ರಿಗೇಳಿ ಈಗ್ಲೇ ಅವುನ್ನ ಒದ್ದು ಒಳಗಾಕಿಸ್ತೀನಿ' ಎಂದು ಹುಸೇನವ್ವನ ಮುಖ ನೋಡಿದರು.

'ಬ್ಯಾಡ್ರಿ ಅಪ್ಪಾರ, ಅವ ಮತ್ತೀಟು ರೊಚ್ಚಿಗೇಳ್ತಾನ, ಯಾ ಹೊತ್ನಾಗೆ ಏನ್ ಮಾಡ್ತಾನೋ ಗೊತ್ತಿಲ್ಲ. ಸದ್ಯ ನಿಮ್ಮಿಂದ ಒಂದು ಸಹಾಯ ಆಗಬೇಕು. ಅದಕ್ಕಂತಾನೇ ಬಂದೇನಿ. ನಾಳಿ ರಾತ್ರಿ ಅವ ಮತ್ತ ಬಂದ್ರೂ ಬರಬೋದು. ಅವನ ಕಾಲ್ದಾಗ ಹೈರಾಣ ಆಗಿ ಹೋಗೇನಿ. ನಾ ಬದುಕಿರೋಗಂಟ ನನ್ನ ಹೊಲ ಮನಿ ಯಾರ್ಗೂ ಕೊಡಾವಲ್ಲೆ. ಸದ್ಯ ಈ ಹೊಲದ ಪತ್ರ ನಿಮ್ಮತ್ರ ಇಟುಗೋರಿ. ಇದು ಅವನ ಕೈಗೆ ಸಿಕ್ರೆ ನನ್ನ ಬೀದಿಪಾಲು ಮಾಡ್ತಾನ...' ಹುಸೇನವ್ವ ತನ್ನ ಸೆರಗಿನಲ್ಲಿ ಮುಚ್ಚಿಟ್ಟುಕೊಂಡು ತಂದಿದ್ದ ಹೊಲದ ಪತ್ರವನ್ನ ಶಂಕರಪ್ಪರ ಕಡಿಗೆ ಕೊಟ್ಟಳು.

'ನಾ ಇದನ್ನ ಇಟುಗೊಳ್ಳೋದು ಛಲೋ ಅಲ್ಲ ಅನುಸ್ತತಿ ಹುಸೇನವ್ವ, ಆದ್ರೂ ನಿನ್ನ ಈ ಸ್ಥಿತಿ ನೋಡಿ ಇಲ್ಲ ಅನ್ನಲಾಕ ಮನಸ್ಸು ಬರಾವಲ್ದು. ಆದಷ್ಟು ಜಲ್ದಿ ನಿನ ಮಗನ ಸಮಸ್ಸಿಗೆ ಏನಾದ್ರೊಂದು ಪರಿಹಾರ ಹುಡುಕು...'

'ನೀವು ಊರಿಗೆ ಹಿರೇರಿದೀರಿ, ಪಂಚಾತಿ ಅಧ್ಯಕ್ಷ ಅದೀರಿ. ನಾನು ನನ ಗಂಡ ಈ ಊರಾಗ ನೆಲಿ ನಿಲ್ಲಾಕ, ಬಾಳೆ ಮಾಡಾಕ ದಾರಿ ತೋರ್ಸೀರಿ. ನಿಮ್ಮತ್ರ ಈ ಪತ್ರ ಇದ್ರನೇ ನಂಗೆ ನೆಮ್ದಿ. ಅದ್ಕೇ ತಂದೀನಿ. ಮುಂದಿನದೆಲ್ಲ ಆ ಮ್ಯಾಲಿನೋನಿಗೆ ಬಿಟ್ಟೇನಿ. ಅವ ಹೆಂಗೆ ನಡಸ್ತಾನೋ ಹಂಗೆ ನಡೀಲಿ' ಎಂದಳು.

ಹುಸೇನವ್ವ ಹೋದ ಮೇಲೆ ಪತ್ರ ಕೈಯಲ್ಲಿಡಿದು ಕೊಂಡು ಶಂಕರಪ್ಪ ಒಬ್ಬರೇ ಕುಂತು ಯೋಚಿಸಿದರು. ಎಂಥ ಗಟ್ಟಿ ಹೆಣಮಗಳು ಈ ಹುಸೇನವ್ವ. ಊರ ಹೊರಗೆ ಎರಡೆಕರಿ ಹದಿನಾರು ಗುಂಟಿ ಜಮೀನಿನಲ್ಲಿ ಒಂದು ಪೆಟಿಗಿ ಅಂಗಡಿ ಇಟಗೊಂಡು ಕೋಳಿ, ಕುರಿ, ಮ್ಯಾಕಿ ಎಲ್ಲ ಸಾಕ್ಕಂಡು ಒಬ್ಬಳ್ಳೇ ಬಾಳೆ ನಡೆಸ್ತದಾಳೆ. ಕೋಳಿ ಸಾಕಿ, ಅವುಗಳ ತತ್ತಿ ಮಾರಿ, ಅರ್ಧೆಕರಿ ಜಮೀನಿನಲ್ಲಿ ಕಾಯಿಪಲ್ಲೆ ಬೆಳೆದು, ಅವನ್ನ ಪ್ಯಾಟಿಗೊಯ್ದು ಕೊಟ್ಟು, ಅಲ್ಲಿಂದ ಅಂಗಡಿಗೆ ಬೇಕಾದ ಸಾಮಾನು ತಂದು... ಒಂದಾ ಎರಡಾ...



ತನಗೆ ಎಷ್ಟು ಬೇಕೋ ಅಷ್ಟು ನಾಟಿ ಕೋಳಿ ತತ್ತೀನ ಮರಿ ಮಾಡ್ಸಿ ಉಳಿದವನ್ನ ಮಾರಿ ಪೈಸಕ್ಕೆ ಪೈಸ ಕೂಡಿಸಿ ತನ್ನ ಹೊಲಕ್ಕೆ ಒಂದು ಬೋರ ಕೊರೆಸಿದ್ದಳು. ತಾನಾತು ತನ್ನ ಪಾಡಾತು ಅಂತ ಬಾಳೇವು ನಡೆಸ್ತಿರೋ ಈ ಹೆಣಮಗಳಿಗೆ ಒಬ್ಬನೇ ಮಗ ಶಫಿಯ ಕಾಟ. ನಾಕು ಹೆಣಮಕ್ಳು ಸತ್ತು ನಂತರ ಹುಟ್ಟಿದವ ಶಫಿ. ಆಮೇಲೆ ಇನ್ನೊಬ್ಬಳು ಮಗಳು ಹಸೀನಾ, ಆಕೀನ್ನ ದೂರದ ಬಳ್ಳಾರಿಗೆ ಮದುವಿ ಮಾಡಿಕೊಟ್ಟದ್ದು ಆಗಾಗ ಮಗಳು, ಅಳಿಯ, ಮೊಮ್ಮಕ್ಕಳು ಬಂದು ಇದ್ದು ಹೋಗಿ ಮಾಡೋದುಂಟು.

ಮೂವತ್ತು ವರ್ಷದ ಹಿಂದೆ ಗಂಡ ಖಾಸೀಮನ ಜತಿ ಬೇವಿನಹಳ್ಳಿಗೆ ಬಂದ ಹುಸೇನವ್ವ, ಗಂಡನ ಸಮಕ್ಕೆ ದುಡಿದು ಒಂದು ಸಂಸಾರ ಅಂತ ಮಾಡಿಕೊಂಡಿದ್ದು, ಊರ ಹೊರಗೆ ತಾವೇ ಕೊಟ್ಟ ತಟಗು ಜಾಗದಲ್ಲಿ ನೆರಿಕಿ ಮನಿ ಕಟ್ಟಿಕೊಂಡಿದ್ದು ಎಲ್ಲ ನೆನಪಾಯ್ತು ಶಂಕರಪ್ಪಗೆ.

ಶಂಕರಪ್ಪ ಜಿಲ್ಲಾ ಪರಿಷತ್ ಮೆಂಬರ್ ಇದ್ದಾಗ ತಮ್ಮೂರು ಬೇವಿನಹಳ್ಳಿಯ ಹೊರಗೆ ನಾಲ್ಕು ದಾರಿ